ಎಂದು ಕೇಳಿದಳು. ನಿಂಗಪ್ಪ 'ಹುಂ' ಎಂದು 'ನಾನು ಹೊಡೆದಿಲ್ಲ ಬೇರೆಯವರು ನಮ್ಮ ಹೊಲದಾಗ ಹೊಡದರು' ಎಂದ.

ಅಷ್ಟೇ ಸುಳಿವು ಹಿಡಿದುಕೊಂಡು 'ನೀವು ದೇವಿ ಹಾವು ಹೊಡೆದೀರಿ. ಅದಕ್ಕ ಹಿಂಗೆಲ್ಲಾ ದಾರಿ ಕಾಣವಲ್ದಾಗೇತಿ ಹೋಗಲಿ ಬಿಡು. ನಿನಗ ಹೊಲದಾಗೆ ಕಳಕಂಡಿದ್ದರ ಹತ್ತು ಪಟ್ಟು ದೇವಿ ಕೊಡತಾಳ ಚೌಡಮ್ಮಗ ಶಾಂತಿ ಮಾಡಿ, ತಪ್ಪಾಯಿತು ಅಂತಾ ಬೇಡಿಕೋ' ಎಂದು ಎಲ್ಲ ಕಾರಣಕ್ಕೂ ನಿಂಗಪ್ಪನೇ ಮೂಲ ಎನ್ನುವಂತೆ ಸರೋಜಮ್ಮ ಸಮಸ್ಯೆಗೆ ಪರಿಹಾರ ಹೇಳುವ ಬದಲು, ಸಮಸ್ಯೆಯನ್ನು ನಿಂಗಪ್ಪ ಕಡೆಗೆ ತಿರುಗಿಸಿದಳು. ಜೊತೆಗೆ ಅದರ ಹತ್ತುಪಟ್ಟು ಮುಂದೆ ಕೊಡುವುದಾಗಿ ಭರವಸೆಯ ಹುಸಿನುಡಿಗಳಾಡಿ ತನ್ನ ತಲೆ ಹಗುರ ಮಾಡಿ ಕೊಂಡು, ನಿಂಗಪ್ಪನ ತಲೆಗೆ ಭಾರ ಕಟ್ಟಿದಳು. ಹೀಗೆ ದೇವರು ದಿಂಡರು ಅಂಜನ ಅಂತೆಲ್ಲಾ ಹುಡುಕಿ ಕೈಸುಟ್ಟುಕೊಂಡರೂ ಯಾವ ದನಗಳ ಸುಳಿವೂ ಹತ್ತಲಿಲ್ಲ. ಹುಡುಕಿಕೊಂಡದ್ದಕ್ಕಿಂತ ಕಳೆದು ಕೊಂಡಿದ್ದೇ ಜಾಸ್ತಿ ಎನ್ನಿಸತೊಡಗಿತು ನಿಂಗಪ್ಪನಿಗೆ.

ನಿಂಗಪ್ಪ ಸೈಕಲ್ ಮೇಲೆ ಹುಲ್ಲು ಹೊರೆ ಹೊತ್ತು ಬರುತ್ತಲೇ ನಾರಾಣಪ್ಪನ ಸೈಕಲ್ ಮನೆಯ ಹೊರಗೆ ನಿಂತಿದ್ದನ್ನ ಗಮನಿಸಿ, ಹುಲ್ಲಿನ ಹೊರೆಯನ್ನು ಸೈಕಲ್‌ನಿಂದಿಳಿಸಿ ಮನೆಯೊಳಕ್ಕೆ ಬಂದು 'ನಾರಾಯಣಿ, ಬಾಳೊತ್ತಾಯ್ತಾ ಬಂದು. ಈಗೆಂಗ್ಯೆತಿ ಕಾಲು' ಎಂದ ನಿಂಗಪ್ಪ. 'ಈಗ್ಯಾಲ್ಡ್ ದಿನದಿಂದಾ ಪಾಡ್ಯೆತಿ ನೋಡ್. ಈಗ ಒಂದ್ ಅರ್ಧ ಗಂಟೆ ಆತು ಬಾ..' ಎಂದ ನಾರಾಣಪ್ಪ.

'ಅಂಬಿ ಸ್ವಲ್ಪ ಚಾಕ್ಕಿಡು' ಎಂದು ಹೆಂಡತಿ ಅಂಬವ್ವಳಿಗೆ ಹೇಳಿ, ಕೈಕಾಲು ತೊಳೆದುಕೊಂಡು ಬಂದ. ನಾರಾಣಪ್ಪನ ಜತೆಗೆ ಮಾತಿಗೆ ಕುಂತ. 'ಏನಾತಪಾ ಏನರ ಸುಳಿವು ಸಿಕ್ಕತಾ? ಯಾರು, ಏನು ಅಂತಾ' ಎಂದು ನಾರಾಣಪ್ಪ ನಿಂಗಪ್ಪನಿಗೆ ಪ್ರಶ್ನಿಸಿದ.

'ಹೋಗಲಾರದ ದೈವವಿಲ್ಲ, ಮಾಡಲಾರದ ಪೂಜೆಯಿಲ್ಲ-ಕೆಲಸಿಲ್ಲ ಎಲ್ಲಾನೂ ಮಾಡಿದೆಪಾ ಆದ್ರೂ ಯಾವ ಸುಳಿವೂ ಇಲ್ಲದಂಗ ಈ ಅನ್ಯಾಯ ಮಾಡಿದ್ರು ಸೂಳೆಮಕ್ಕಳು. ಹೋಗಲಿಬಿಡು ಅವರ ಮಾಡಿದ್ ಅವರ ಉಣ್ತಾರ' ನಿಂಗಪ್ಪ ತನ್ನ



ಕೈಯಲ್ಲೇನು ಇಲ್ಲವೆಂಬಂತೆ ಶಕ್ತಿಗುಂದಿದ ಮಾತಿನಲ್ಲಿ ಉತ್ತರಿಸಿದ.

ಹೆಂಡತಿ ಅಂಬವ್ವ ಚಹಾ ತಂದು ಕೊಡುತ್ತಾ 'ದೇವಿ ಅದರ ಹತ್ತು ಪಟ್ಟು ಕೊಡತೀನಂತಾ ಹೇಳ್ಯಾಳಲ್ಲಾ. ಹೋಗಲಿಬುಡು. ನಾವು ಅಕಿ ಹೇಳಿದಂಗ ನಡಕಂಡ್ರಾತು' ಎಂದು ಆಶಾದಾಯಕ ನುಡಿಯಾಡಿದಳು.

ನಿಂಗಪ್ಪನಿಗೆ ಪಿತ್ತ ನೆತ್ತಿಗೇರಿತು. 'ಇನ್ನು ನಿನಗ ಹುಚ್ಚ ಬಿಡದುಲ್ಲಾ ಅಂತಾ ಕಾಣ್ತತಿ ಹೋಗ್ ಹೋಗ್' ಎಂದು ಸಿಟ್ಟಿನಿಂದ ಹೆಂಡತಿಗೆ ಬೈದ. ಮಾತು ಯಾಕೋ ವಿಪರೀತಕ್ಕೇರುವಂತೆ ಕಂಡಿತು ನಾರಾಣಪ್ಪನಿಗೆ. ನಿಂಗಪ್ಪ ಚಹಾ ಕುಡಿದು ಮುಗಿಸುವುದನ್ನೇ ಕಾದು, ಊರ ಪೇಟೆ ಕಡೆ ಹೋಗೋಣವೆಂದು ನಾರಾಣಪ್ಪ ಮಾತು ಬದಲಿಸಿದ. ಇಬ್ಬರೂ ತಮ್ಮ ತಮ್ಮ ಸೈಕಲ್‌ನ್ನು ಏರಿ ಊರ ಪೇಟೆಗೆ ಬಂದು ಸೇರಿದರು.

'ನಾರಾಣಿ ನಾಳೆ ನಿನಿಗೆ ಏನರ ಕೆಲಸಾ ಐತ್ಯಾ?'

'ಯಾಕ್ ನಿಂಗಪ್ಪಾ, ಬಾಳೆ ಹೊಲದ್ ಕಡೆ ಸಲೂಪ ಹೋಗಿ ಬರಬಕು ಅಷ್ಟ'

'ಹೊನ್ನಾಳಿದು ನಾಳೆ ದನದ ಸಂತೆನ ಅಲಾ, ಸಲೂಪ ಹೋಗಿ ಬರಾನ ಬರ್ತೀಯಾ?'

'ಯಾಕ್ ನಿಂಗಪ್ಪಾ, ಮತ್ತ ದನಾ ಸಿಗ್ತಾವನಾ ನೋಡಿ ಬರಾನಾ ಹೆಂಗ್? ಇಷ್ಟು ಹುಡಕೋ ಖರ್ಚನ್ಯಾಗ ಯಾಲ್ಡ್ ಎತ್ತು ಬರ್ತಿದ್ವಪಾ ಸುಮ್ನ ರೊಕ್ಕ, ಟೈಮು, ನೆಮ್ದಿ ಎಲ್ಲಾ ದಂಡ ನೋಡ್'

ನಿಂಗಪ್ಪನಿಗೆ ತೇರುಗಡ್ಡಿ ಸ್ವಾಮೇರು, ಅಂಜನದ ರಾಮಪ್ಪ, ಬಾಬಣ್ಣ, ಸರೋಜಮ್ಮಳ ದೈವವಾಣಿಗಿಂತ, ನಾರಾಣಿ ಮಾತು ಯಾಕೋ ಹಿತ ಅನ್ನಿಸಿತು.

'ಇಲ್ಲ ಎರಡಲ್ಲಿನವು ಸಣ್ಣ ಯಾಲ್ಡ್ ಹೋರಿ ಕೊಂಡ್ ತರಾನ ಅಂತಾ ಮಾಡೇನಿ. ಅದುಕ್ಕಾ ಬರತೀಯಾ ಅಂತ ಕೇಳಿದೆ'. ●